# ಎನ್‌ಐಟಿಕೆ: ಆರೋಗ್ಯ ಕೇಂದ್ರಕ್ಕೆ ವೈದ್ಯಕೀಯ ಉಪಕರಣ ಕೊಡುಗೆ



**ಸುರತ್ಕಲ್, ಫೆ. 4:** ಭಾರತ ಸರಕಾರದ ರಕ್ಷಣ ಸಚಿವಾಲಯದ ಅಡಿಯಲ್ಲಿ ಬೆಂಗಳೂರಿನ ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್ (ಬಿಇಎಲ್) ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ ಚಟುವಟಿಕೆಗಳ ಭಾಗವಾಗಿ ಎನ್‌ಐಟಿಕೆನ ಆರೋಗ್ಯ ಕೇಂದ್ರಕ್ಕೆ ವೈದ್ಯಕೀಯ ಮತ್ತು ಫಿಸಿಯೋಥೆರಪಿ ಉಪಕರಣಗಳನ್ನು ಕೊಡುಗೆಯಾಗಿ ನೀಡಿದೆ.

ಸುಮಾರು 10 ಲಕ್ಷ ರೂ. ಮೌಲ್ಯದ ಈ ಉಪಕರಣಗಳಲ್ಲಿ ಇಸಿಜಿ ಯಂತ್ರ, ಥೈರಾಯ್ಡ್ ಫಂಕ್ಷನ್ ಟೆಸ್ಟ್ ಅನಲೈಸರ್ ಮತ್ತು ಫಿಸಿಯೋಥೆರಪಿ ಉಪಕರಣಗಳು ಸೇರಿವೆ. ಸುಮಾರು 7,000 ವಿದ್ಯಾರ್ಥಿಗಳು, 1,500 ಬೋಧಕರು, ಸಿಬಂದಿ, ಅವರ ಕುಟುಂಬಗಳು, ಕ್ಯಾಂಪಸ್ ಹೊರಗೆ ವಾಸಿಸುವ ಸುಮಾರು 600 ನಿವೃತ್ತ ನೌಕರರು ಮತ್ತು ಅವರ ಕುಟುಂಬಗಳು ಇಲ್ಲಿನ ಕ್ಲಿನಿಕ್ ಸೌಲಭ್ಯ ಪಡೆಯುತ್ತಿದ್ದಾರೆ.ಬಿಇಎಲ್ ಅಧಿಕಾರಿ ಶ್ರೀಕಾಂತ್ ವಾಲ್ಗಡ್, ಐಎಎಸ್, ಎನ್ ಐಟಿಕೆ ನಿರ್ದೇಶಕ ಪ್ರೊ| ಬಿ. ರವಿ, ಬಿಇಎಲ್‌ನ ಪರಿಸರ ಮತ್ತು ಕಾರ್ಪೊರೇಟ್ ಜವಾಬ್ದಾರಿಯ ಡಿಜಿಎಂ ಶಶಿಭೂಷಣ ಎಚ್.ಎಸ್., ಸಿ.ಎಸ್.ಆರ್.ನ ಹಿರಿಯ ಎಂಜಿನಿಯರ್ ರವಿಕಾಂತ್ ನಾಯಕ್, ಎನ್‌ಐಟಿಕೆ ಹಳೆಯ ವಿದ್ಯಾರ್ಥಿಗಳು ಮತ್ತು ಕಾರ್ಪೊರೇಟ್ ಸಂಬಂಧಗಳ ಡೀನ್ ಪ್ರೊ| ಶ್ರೀಕಂಠ ಎಸ್.ರಾವ್, ಡೀನ್ ಯೋಜನ ಮತ್ತು ಅಭಿವೃದ್ಧಿ, ಪಿಐಸಿ ಎಚ್ಸಿ ಡಾ| ಸೌಮ್ಯಾ ಹೆಗ್ಡೆ, ಡಾ| ಬಾಲಭಾಸ್ಕರ್, ಆರ್ ಎಂಒ, ಎನ್‌ಐಟಿಕೆ ಮತ್ತು ಇತರ ವೈದ್ಯರು, ಪಿಐಸಿಗಳು, ಬೋಧಕರು, ಸಿಬಂದಿ ಮತ್ತು ವಿದ್ಯಾರ್ಥಿಗಳು ಭಾಗವಹಿಸಿದ್ದರು.

Udayavani, Date:05/02/24, p, no -03